**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 890 |
| **ಸದಸ್ಯರ ಹೆಸರು** | : | ಶ್ರೀ ಗಣಪತಿ ದುಮ್ಮಾ ಉಳ್ವೇಕರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸುವ ದಿನಾಂಕ** | : | 11.03.2026 |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯ ಸರ್ಕಾರದ ಅಧೀನದಲ್ಲಿ ಘೋಷಣೆ ಆಗಿರುವ ಬಂದರುಗಳು ಎಷ್ಟು; (ವಿವರ ನೀಡುವುದು) | ಭಾರತೀಯ ಬಂದರುಗಳ ಕಾಯ್ದೆ 1908 (Indian Ports Act, 1908) ರ ಅಡಿಯಲ್ಲಿ ಕರ್ನಾಟಕ ರಾಜ್ಯದ ಕರಾವಳಿ ತೀರದಲ್ಲಿ ಈ ಕೆಳಕಂಡ ಒಟ್ಟು 13 ಕಿರು ಬಂದರುಗಳನ್ನು ಅಧಿಸೂಚಿಸಲಾಗಿದೆ. |

| | | | |
|---|---|---|---|
| 1 | ಕಾರವಾರ | 8 | ಭಟ್ಕಳ |
| 2 | ಬೇಲೇಕೇರಿ | 9 | ಕುಂದಾಪುರ |
| 3 | ಕೇಣಿ | 10 | ಹಂಗಾರಕಟ್ಟೆ |
| 4 | ತದಡಿ | 11 | ಮಲ್ಪೆ |
| 5 | ಪಾವಿನಕುರ್ವೆ | 12 | ಪಡುಬಿದ್ರಿ |
| 6 | ಹೊನ್ನಾವರ | 13 | ಹಳೇ ಮಂಗಳೂರು |
| 7 | ಮಂಕಿ | | |

ಮಂಗಳೂರು ಬಂದರು (ನವ ಮಂಗಳೂರು ಬಂದರು) ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವ ಏಕೈಕ ಪ್ರಮುಖ ಬಂದರು ಆಗಿರುತ್ತದೆ.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಆ) | ಕಳೆದ 3 ವರ್ಷಗಳಲ್ಲಿ ಬಂದರು ಅಭಿವೃದ್ಧಿಗೆ ಖರ್ಚು ಮಾಡಿರುವ ಅನುದಾನ ಎಷ್ಟು; (ಬಂದರುವಾರು ವಿವರ ನೀಡುವುದು) | ರಾಜ್ಯದ ಬಂದರುಗಳ ಅಭಿವೃದ್ಧಿಗೆ ಕಳೆದ 3 ವರ್ಷಗಳಲ್ಲಿ ವೆಚ್ಚ ಮಾಡಿರುವ ಅನುದಾನದ ವಿವರ ಈ ಕೆಳಕಂಡಂತಿದೆ. |

**( ರೂ. ಲಕ್ಷಗಳಲ್ಲಿ)**

| **ಬಂದರು** | **2022-23** | **2023-24** | **2024-25** |
|---|---|---|---|
| ಕಾರವಾರ | 1066.97 | 1875.28 | 1069.31 |
| ಕೇಣಿ | - | - | 47.40 |
| ಮಂಕಿ | - | 38.94 | - |
| ಕುಂದಾಪುರ | 12.48 | - | - |
| ಹಂಗಾರಕಟ್ಟೆ | 11.86 | - | 86.43 |
| ಮಂಗಳೂರು | 1852.00 | 1065.67 | 717.76 |
| ಮಲ್ಪೆ | 62.98 | - | 4.55 |
| ಒಟ್ಟು | 3006.29 | 2979.89 | 1925.45 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಇ) | ಕಳೆದ 3 ವರ್ಷಗಳಲ್ಲಿ ರಾಜ್ಯದ ವಾಣಿಜ್ಯ ಬಂದುರಗಳಲ್ಲಿ ಹೂಳೆತ್ತಲು ಮಾಡಿರುವ ವೆಚ್ಚಗಳು ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು) | ಕಳೆದ 3 ವರ್ಷಗಳಲ್ಲಿ ರಾಜ್ಯದ ವಾಣಿಜ್ಯ ಬಂದರುಗಳಲ್ಲಿ ಹೊಳೆತ್ತಲು ವೆಚ್ಚ ಮಾಡಿರುವ ಅನುದಾನದ ವಿವರ ಈ ಕೆಳಕಂಡಂತಿದೆ. |

**(₹ ಲಕ್ಷಗಳಲ್ಲಿ)**

| **ಜಿಲ್ಲೆ** | **ಆರ್ಥಿಕ ವರ್ಷ** | | |
|---|---|---|---|
| | **2022-23** | **2023-24** | **2024-25** |
| ಉತ್ತರ ಕನ್ನಡ | - | 2250.00 | 1500.00 |
| ಉಡುಪಿ | - | - | - |
| ದಕ್ಷಿಣ ಕನ್ನಡ | - | - | - |

**(ಈ)** ಉತ್ತರ ಕನ್ನಡ ಜಿಲ್ಲೆಯ ಬಂದರುಗಳ ಅಭಿವೃದ್ಧಿಗೆ 5 ವರ್ಷಗಳಲ್ಲಿ ಮೀಸಲಿಟ್ಟ ಅನುದಾನ ಎಷ್ಟು ವೆಚ್ಚ ಮಾಡಿರುವ ಅನುದಾನ ಎಷ್ಟು; (ವರ್ಷವಾರು ವಿವರ ನೀಡುವುದು)

ಉತ್ತರ ಕನ್ನಡ ಜಿಲ್ಲೆಯ ಬಂದರುಗಳ ಅಭಿವೃದ್ಧಿಗೆ ಕಳೆದ 5 ವರ್ಷಗಳಲ್ಲಿ ಮೀಸಲಿಟ್ಟ ಹಾಗೂ ವೆಚ್ಚ ಮಾಡಿರುವ ಅನುದಾನದ ವಿವರಗಳು ಈ ಕೆಳಗಿನಂತಿವೆ.

**(₹ ಲಕ್ಷಗಳಲ್ಲಿ)**

| ಆರ್ಥಿಕ ವರ್ಷ | ಮೀಸಲಿಟ್ಟ ಅನುದಾನ | ವೆಚ್ಚ ಮಾಡಲಾದ ಅನುದಾನ |
|---|---|---|
| 2020-21 | 2125.76 | 995.00 |
| 2021-22 | 3782.10 | 1488.00 |
| 2022-23 | 2774.44 | 1056.97 |
| 2023-24 | 3628.09 | 4164.22 |
| 2024-25 | 2893.40 | 2616.71 |

**(ಉ)** ರಾಜ್ಯದ ಬಂದರುಗಳ ದ್ವೀಪಗಳಲ್ಲಿ ಇರುವ ದೇವಸ್ಥಾನಗಳು ಎಷ್ಟು;

**(ಊ)** ದ್ವೀಪಗಳಲ್ಲಿ ಇರುವ ದೇವಸ್ಥಾನಗಳಿಗೆ ಹೋಗಿ ಬರಲು ಉಂಟಾಗುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು

ರಾಜ್ಯದ ಬಂದರುಗಳ ದ್ವೀಪಗಳಲ್ಲಿ ಕರ್ನಾಟಕ ಜಲಸಾರಿಗೆ ಮಂಡಳಿಯ ಅಧೀನದಲ್ಲಿರುವ ಕಾರವಾರ ಬಂದರು ವ್ಯಾಪ್ತಿಯ ಕೂರ್ಮಗಡ ದ್ವೀಪದಲ್ಲಿ ಶ್ರೀ ನರಸಿಂಹ ದೇವರ ದೇವಸ್ಥಾನ ಮತ್ತು ಬೇಲೇಕೇರಿ ಬಂದರು ವ್ಯಾಪ್ತಿಯ ಕೊಕ್ರಾಲ ದ್ವೀಪದಲ್ಲಿ ಶ್ರೀ ಕುಕ್ಕಡೇಶ್ವರ ದೇವರ ದೇವಸ್ಥಾನ ಇರುತ್ತವೆ.

ದ್ವೀಪಗಳಲ್ಲಿರುವ ದೇವಸ್ಥಾನಗಳಿಗೆ ಭಕ್ತಾದಿಗಳು ವರ್ಷದಲ್ಲಿ ಕೇವಲ ಒಂದು ದಿನ (ಜಾತ್ರಾ ಮಹೋತ್ಸವದಂದು) ಮಾತ್ರ ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ. ಈ ಸಂದರ್ಭದಲ್ಲಿ ಭಕ್ತರ ಸುರಕ್ಷತೆ ಮತ್ತು ಸುಗಮ ಸಂಚಾರಕ್ಕಾಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಕಂದಾಯ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಗಳ ನಡುವೆ ಸಮನ್ವಯತೆ ಸಾಧಿಸಿ ಭಕ್ತರ ಸುರಕ್ಷತೆಗೆ ಆದ್ಯತೆ ನೀಡಲಾಗುತ್ತಿದೆ.

ಬಂದರು ಇಲಾಖೆಯ ವತಿಯಿಂದ ದೋಣಿಗಳಲ್ಲಿ ಲೈಫ್ ಜಾಕೆಟ್ ಬಳಕೆಯನ್ನು ಕಡ್ಡಾಯಗೊಳಿಸಿದ್ದು, ಪ್ರಯಾಣಿಕರ ಸುರಕ್ಷತೆಯ ಬಗ್ಗೆ ತಪಾಸಣೆ ನಡೆಸಲಾಗುತ್ತದೆ ಹಾಗೂ ದ್ವೀಪಕ್ಕೆ ತೆರಳಲು ಬಂದರು ಇಲಾಖೆಯಿಂದ ಮೂಲಸೌಕರ್ಯಗಳನ್ನು ಬಳಸಿ ಕೊಳ್ಳಲು ಅಗತ್ಯ ಅನುಕೂಲತೆಗಳನ್ನು ಮಾಡಿಕೊಡಲಾಗುತ್ತಿದೆ.

**IDD 18 PSP 2026**

**(ಮಂಕಾಳ ಎಸ್. ವೈದ್ಯ)**
**ಮೀನುಗಾರಿಕೆ, ಬಂದರು ಮತ್ತು**
**ಒಳನಾಡು ಜಲಸಾರಿಗೆ ಸಚಿವರು**